ದಿಃ **05-12-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **No 3** ಪರ ಶ್ರೀ.**KMJ** ವಕೀಲರವರಿಂದಃ

**04.** ದಾವಾ ಆಸ್ತೀಗಳನ್ನು ನಾನು ನೋಡಿರುವುದಿಲ್ಲ ನನ್ನ ತಂದೆ ನೋಡಿಕೊಂಡು ಹೋಗುತ್ತಿದ್ದರು. ನನ್ನ ತಂದೆ ಯಾವತ್ತಿಗೂ ದಾವಾ ಆಸ್ತೀಗಳನ್ನು ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತೀಗಳು ನನ್ನ ತಂದೆ ಮತ್ತು ಪ್ರತಿವಾದಿಯರ ತಂದೆ ಹೆಸರಿಗೆ ಜಂಟಿಯಾಗಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತೀಗಳು ನಿಂಗಪ್ಪರವರ ಹೆಸರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತೀಗಳು ನಿಂಗಪ್ಪರವರ ಸ್ವಂತ ಆಸ್ತೀಗಳು ಎಂದರೆ ಸರಿಯಲ್ಲ. ಪಹಣಿಗಳು ಚಾಲ್ತಿಯಲ್ಲಿ ಇದ್ದಾಗಿನಿಂದಲೂ ಸಹ ದಾವಾ ಆಸ್ತೀಗಳು ನಿಂಗಪ್ಪರವರ ಹೆಸರಿನಲ್ಲಿ ಇದ್ದು ನಾವು ಅವರ ಹೆಸರನ್ನು ತೆಗೆದುಹಾಕಲು ಅರ್ಜಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಯಾವಾಗಲೂ ಸಹ ದಾವಾ ಆಸ್ತೀಗಳಲ್ಲಿ ಪಾಲು ಕೊಡಿ ಎಂದು ಕೇಳಿರುವುದಿಲ್ಲ ಎಂದರೆ ನನ್ನ ತಂದೆ ಪಾಲು ಕೊಡಿ ಎಂದು ಕೇಳಿರುತ್ತಾರೆ ಆದರೆ ಅವರು ಮುಂದುಡುತ್ತಾ ಹೋಗಿರುತ್ತಾರೆ. **50-60** ವರ್ಷಗಳ ಹಿಂದ ನನ್ನ ತಂದ ಪಾಲು ಕೊಡಿ ಎಂದು ಕೇಳಿರುತ್ತಾರೆ. ನನ್ನ ತಂದೆ ಯಾವತ್ತಿಗೂ ಸಹ ಪಾಲು ಕೊಡಿ ಎಂದು ಕೇಳಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ದಾವಾ ಆಸ್ತೀಗಳು ಅವರ ಸ್ವಂತ ಆಸ್ತೀ ಆಗಿರುವುದಿಲ್ಲ ಎಂದು ಗೊತ್ತಿದ್ದು ಹೀಗಾಗಿ ಅವರು ಪಾಲು ಕೊಡಿ ಎಂದು ಕೇಳಿರುವುದಿಲ್ಲ ಎಂದರೆ ಮುಂದೆ ಕೊಡುತ್ತೇವೆ ಎಂದು ಮುಂದುಡುತ್ತಾ ಬಂದಿರುತ್ತಾರೆ. ನನ್ನ ತಂದೆಗೆ ದಾವಾ ಆಸ್ತೀಗಳಲ್ಲಿ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಅಧಿಕಾರ ಇರುತ್ತದೆ ಅಜ್ಜ ಅಮ್ಮನ ಆಸ್ತೀ ಆಗಿರುವುದರಿಂದ ಅಧಿಕಾರ ಇರುತ್ತದೆ.

**05.** ನಾನು ನನ್ನ ಅಣ್ಣ ಸೇರಿಕೊಂಡು ನಿಂಗಪ್ಪನ ವಿರುದ್ಧ ಇದೇ ಆಸ್ತೀಗಳ ವಿಷಯವಾಗಿ ಇದೇ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ

ಸರಿ. ಅದರ ನಂಬರ **OS.No.36/2008** ಎಂದರೆ ಸರಿ. ಸದರಿ ಪ್ರಕರಣ ವಜಾ ಆಗಿರುತ್ತದೆ ಎಂದರೆ ವಜಾ ಆಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಿಂಗಪ್ಪರವರು ನಮಗೆ ಬೆದರಿಕೆ ಹಾಕಿದ್ದರಿಂದ ನಾವು ಹಿಂದಕ್ಕೆ ಸರೆದಿರುತ್ತೇವೆ. ಈ ವಿಷಯವನ್ನು ನಮ್ಮ ವಾದ ಪತ್ರದಲ್ಲಿ ನಾವು ಬರೆಸಿರುತ್ತೇವೆ. ವಜಾ ಆದ ನಂತರ ಅದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸಲ್ಲಿಸಿರುವುದಿಲ್ಲ. ಈಗ ನಿಂಗಪ್ಪರವರು ತೀರಿಕೊಂಡ ನಂತರ ಅದೇ ಕಾರಣದ ಮೇಲೆ ಅವರ ಮಕ್ಕಳ ಮೇಲೆ ಈ ಪ್ರಕರಣವನ್ನು ಪುನಃ ಹೂಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಾಯಿ ಬಂದು ಪಾಲುಕೊಡಿ ಎಂದು ಕೇಳಿದಾಗ ಅವರು ಕೊಡುವುದಿಲ್ಲ ಎಂದು ಹೇಳಿರುತ್ತಾರೆ.

**06.** ಈ ರೀತಿಯಾಗಿ ಪ್ರತಿವಾದಿಯರ ಮೇಲೆ ಸುಳ್ಳು ಪ್ರಕರಣವನ್ನು ಪ್ರತಿವಾದಿಯರ ಮೇಲೆ ಅವರು ರಾಜಿ ಆಗುತ್ತಾರೆ ಎಂದು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಹಿಂದೆ ಸಲ್ಲಿಸಿರುವ ಪ್ರಕರಣವನ್ನು ಮುಚ್ಚಿಟ್ಟು ಈ ಪ್ರಕರಣವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**07.** ದಾವಾ ಆಸ್ತೀಗಳು ಒಟ್ಟು **12** ಎಕರೆ ಇರುತ್ತವೆ. **2017** ರಲ್ಲಿ **1** ಎಕರೆಗೆ ಅಂದಾಜು **10** ಲಕ್ಷ ರೂಪಾಯಿ ಬೆಲೆ ಬಾಳುತ್ತದೆಯಾ ಎಂದರೆ ನನಗೆ ಗೊತ್ತಿರುವುದಿಲ್ಲ. ಅಂದಾಜು **2017** ರಲ್ಲಿ ದಾವಾ ಆಸ್ತೀಗಳು ಒಟ್ಟಾಗಿ **1** ಕೋಟಿ ರೂಪಾಯಿ ಬೆಲೆ ಬಾಳುತ್ತದೆ ಎಂದರೆ ಸರಿ. ದಾವಾ ಆಸ್ತೀಗಳು ನನ್ನ ತಂದೆ ಮತ್ತು ನನ್ನ ಅಜ್ಜ ಸಿದ್ಲಿಂಗಪ್ಪರವರದ್ದು ಎಂದು ತೋರಿಸಲು ಯಾವ ದಾಖಲೆಗಳನ್ನು ಹಾಕಿರುತ್ತೇವೆ ಎಂದರೆ ಪಹಣಿಗಳನ್ನು ಹಾಕಿರುತ್ತೇವೆ. ಈಗ ಸಾಕ್ಷಿಗೆ ಅವರ ಪರ ಗುರುತಿಸಿಕೊಂಡಂತಹ ದಾಖಲೆಗಳನ್ನು ತೋರಿಸಿ ಸಾಕ್ಷಿಯು ಇದರಲ್ಲಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

**08.** ನನ್ನ ಅಜ್ಜ ಆಗಲಿ ನನ್ನ ತಂದೆಯಾಗಲಿ ಅಥವಾ ನಾನಾಗಲಿ ಯಾವುದೇ ತೆರಿಗೆಯನ್ನು ದಾವಾ ಆಸ್ತೀಗಳ ಸಂಬಂಧವಾಗಿ ಕಟ್ಟಿರುವುದಿಲ್ಲ ಎಂದರೆ ನನ್ನ ತಂದೆ ಇದ್ದಾಗ ಅವರು ತೆರಿಗೆಯನ್ನು ಕಟ್ಟಿರುತ್ತಾರೆ ಅವರು ತೀರಿಕೊಂಡ

ನಂತರ ತೆರಿಗೆಯನ್ನು ಕಟ್ಟಿರುವುದಿಲ್ಲ. ನನ್ನ ತಂದೆಯು ಸಹ ಯಾವುದೇ ತೆರಿಗೆಯನ್ನು ಕಟ್ಟಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನಾವು ಜಂಟಿಯಾಗಿ ಸಾಗುವಳಿ ಮಾಡುವ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

**09.** ಯಾವ ದಿನಾಂಕದಂದು ದಾವಾ ಆಸ್ತಿಗಳಲ್ಲಿ ಪಾಲು ಕೇಳಿರುತ್ತೇವೆ ಎಂದರೆ **4** ವರ್ಷದ ಹಿಂದೆ ನಾವು ಪಾಲು ಕೇಳಿರುತ್ತೇವೆ. ನಾವು ಗದಗಿನಲ್ಲಿ ಪಾಲು ಕೊಡಿ ಎಂದು ಕೇಳಿರುತ್ತೇವೆ. ನಾನು ನನ್ನ ಅಣ್ಣ ಮತ್ತು ನನ್ನ ಗಂಡ ಪಾಲು ಕೇಳಲು ಹೋಗಿರುತ್ತೇವೆ. ಈ ಪ್ರಕರಣವನ್ನು ಹಾಕಲು ನಾವೆಲ್ಲ ಸುಳ್ಳು ಕತೆ ಕಟ್ಟಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**10.** ದಾವಾ ಆಸ್ತಿಗಳು ನಿಂಗಪ್ಪನಿಗೆ ಹೇಗೆ ಬಂತು ಎಂದರೆ ದಾವಾ ಆಸ್ತಿಗಳು ನನ್ನ ಅಜ್ಜ ಅಮ್ಮನ ಆಸ್ತಿಗಳು ಆಗಿರುತ್ತವೆ ನಿಂಗಪ್ಪನ ಆಸ್ತಿಗಳಲ್ಲಾ. ದಾವಾ ಆಸ್ತಿಗಳ ಮೂಲತಹ ಯಾವುದು ಮತ್ತು ಹೇಗೆ ಬಂದಿತು ಎಂದು ಮಾಹಿತಿ ಇಲ್ಲ ಎಂದರೆ ಮಾಹಿತಿ ಇರುತ್ತದೆ. ನಾನು ಮತ್ತು ನನ್ನ ಅಣ್ಣ ಹುಬ್ಬಳ್ಳಿಯಲ್ಲಿಯೇ ಜನಿಸಿರುತ್ತೇವೆ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳಲ್ಲ ಹೀಗಾಗಿ ನಮಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"
**Sd/-**
(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.